೧. ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಜಾಲ್ಸೂರು–ಮುರೂರು–ಪುಂಡೇಕೋಲು ಕಾಸರಗೋಡು ಅಂತರ ಜಿಲ್ಲಾ ರಸ್ತೆಯ ಡಾಂಬರೀಕರಣ ಹಾಗೂ ಸೇತುವೆ ನಿರ್ಮಾಣದ ಬಗ್ಗೆ.

೨. ಸುಳ್ಯ ವಿಧಾನ ಸಭಾ ಕ್ಷೇತ್ರದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಹಾಸನ ಜಿಲ್ಲೆಯ ಅಂತರ ಜಿಲ್ಲಾ ಸಕಲೇಶಪುರ–ಸುಬ್ರಮಣ್ಯ ರಸ್ತೆಯ ದುರಸ್ತಿ ಹಾಗೂ ಮುರಿದಿರುವ ಸೇತುವೆಯ ದುರಸ್ತಿ ಬಗ್ಗೆ.

೩. ಸುಳ್ಯ ವಿಧಾನ ಸಭಾ ಕ್ಷೇತ್ರದ ಅಂತರ ಜಿಲ್ಲಾ ಸುಬ್ರಮಣ್ಯ–ಸೋಮವಾರ ಪೇಟೆ ದೇವರಗುಂಡ ರಸ್ತೆ ನಿರ್ಮಾಣದ ಬಗ್ಗೆ.

ಅಧ್ಯಕ್ಷರು.—ಸಭೆಗೆ ಅರ್ಜಿಗಳನ್ನು ಒಪ್ಪಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಪ್ರೊ। ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಮತ್ತು ಯೋಜನೆ, ನೀರಾವರಿ ಮಂತ್ರಿಗಳ ಹೆಸರಿನಲ್ಲಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡಬಯಸುತ್ತೇನೆ.

೧. ೧೯೮೭–೮೮ನೇ ಸಾಲಿನ ಬೀಳಗಿ ತಾಲ್ಲೂಕಿನ ೧೭ ಗ್ರಾಮಗಳಿಗೆ ಭೂ ಕಂದಾಯ ವಸೂಲಾತಿಯ ಬಗ್ಗೆ ದಿನಾಂಕ ೨೨–೧–೮೮ರಂದು ಹೊರಡಿಸಲಾದ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೬೨/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು.

೨. ೧೯೮೭–೮೮ನೇ ಸಾಲಿನ ಜಮಖಂಡಿ ತಾಲ್ಲೂಕಿನ ೧೮ ಗ್ರಾಮಗಳಿಗೆ ಭೂ ಕಂದಾಯ ವಸೂಲಾತಿಯ ಬಗ್ಗೆ ದಿನಾಂಕ ೨೨–೧–೮೮ರಂದು ಹೊರಡಿಸಲಾದ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೬೩/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು.

೩. ೧೯೮೭–೮೮ನೇ ಸಾಲಿನ ಮುದ್ದೇಬಿಹಾಳ್ ತಾಲ್ಲೂಕಿನ ೬೮ ಗ್ರಾಮಗಳಿಗೆ ಭೂ ಕಂದಾಯ ವಸೂಲಾತಿಯ ಬಗ್ಗೆ ದಿನಾಂಕ ೨೨–೧–೮೮ರಂದು ಹೊರಡಿಸಲಾದ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೬೫/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು.

೪. ೧೯೮೭–೮೮ನೇ ಸಾಲಿನ ಮುದ್ದೇಬಿಳ್ ತಾಲ್ಲೂಕಿನ ೧೬ ಗ್ರಾಮಗಳಿಗೆ ಭೂ ಕಂಧಾಯ ವಸೂಲಾತಿಯ ಬಗ್ಗೆ ದಿನಾಂಕ ೨೨–೧–೮೮ರಂದು ಹೊರಡಿಸಲಾದ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೬೬/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು.

೫. ೧೯೮೭–೮೮ನೇ ಸಾಲಿನ ಬಾದಾಮಿ ತಾಲ್ಲೂಕಿನ ೧೧೪ ಗ್ರಾಮಗಳಿಗೆ ಭೂ ಕಂದಾಯ ವಸೂಲಾತಿಯ ಬಗ್ಗೆ ದಿನಾಂಕ ೨೩–೧–೮೮ರಂದು ಹೊರಡಿಸಲಾದ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೬೭/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು

೬. ೧೯೮೭–೮೮ನೇ ಸಾಲಿನ ಬಾಗಲಕೋಟೆ ತಾಲ್ಲೂಕಿನ ೩೬ ಗ್ರಾಮಗಳಿಗೆ ಭೂ ಕಂದಾಯ ವಸೂಲಾತಿಯ ಬಗ್ಗೆ ದಿನಾಂಕ ೨೭–೨–೮೮ರಂದು ಹೊರಡಿಸಲಾದ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೬೯/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು.

೭. ೧೯೮೭–೮೮ನೇ ಸಾಲಿನ ಇಂಡಿ ತಾಲ್ಲೂಕಿನ ೨೭ ಗ್ರಾಮಗಳಿಗೆ ಭೂ ಕಂದಾಯ ವಸೂಲಾತಿಯ ಬಗ್ಗೆ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೭೧/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು.

೮. ೧೯೮೭–೮೮ನೇ ಸಾಲಿನ ಹುನಗುಂದ ತಾಲ್ಲೂಕಿನ ೫೬ ಗ್ರಾಮಗಳಿಗೆ ಭೂ ಕಂದಾಯ ವಸೂಲಾತಿಯ ಬಗ್ಗೆ ದಿನಾಂಕ ೩–೩–೮೮ ರಂದು ಹೊರಡಿಸಲಾದ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೭೨/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು:

೯. ೧೯೮೭–೮೮ನೇ ಸಾಲಿನ ಬಸವನಬಾಗೇವಾಡಿ ತಾಲ್ಲೂಕಿನ ೧೨೦ ಗ್ರಾಮಗಳಿಗೆ ಭೂಕಂದಾಯ ವಸೂಲಾತಿಯ ಬಗ್ಗೆ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೭೩/೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು.

೧೦. ೧೯೮೭–೮೮ನೇ ಸಾಲಿನ ಸಿಂದಗಿ ತಾಲ್ಲೂಕಿನ ೬೨ ಗ್ರಾಮಗಳಿಗೆ ಭೂ ಕಂದಾಯ ವಸೂಲಾತಿಯ ಬಗ್ಗೆ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೭೪/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು.

೧೧. ೧೯೮೭–೮೮ನೇ ಸಾಲಿನ ವಿಜಾಪುರ ತಾಲ್ಲೂಕಿನ ೧೦೯ ಗ್ರಾಮಗಳಿಗೆ ಭೂಕಂದಾಯ ವಸೂಲಾತಿಯ ಬಗ್ಗೆ ದಿನಾಂಕ ೩–೩–೮೮ ರಂದು ಹೊರಡಿಸಲಾದ ಸಂಖ್ಯೆ ಆರ್‌ಬಿ ಆರ್‌ಇವಿ ಸಿಆರ್ ೭೫/೮೭–೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುವುದು.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮುಂದಿಸಲಾಯಿತು.

ನಿಲುವಳಿ ಸೂಚನೆ (ಅನುಮತಿ ಕೋರಿಕೆ)

ಜಯನಗರದಲ್ಲಿರುವ ರೇವಜಿತ್ ಬಿಲ್ಡರ್ಸ್‌ರವರು ಜಮೀನು ಖರೀದಿ ಮಾಡಿರುವ ಬಗ್ಗೆ

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ, ರೇವಜಿತ್ ಬಿಲ್ಡರ್ಸ್ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಜಯನಗರದಲ್ಲಿ ನಾರಾಯಣಸ್ವಾಮಿ ಅಂಡ್ ಸನ್ಸ್ ಅವರಿಂದ 5 ಎಕರೆ 22 ಗುಂಟೆ ಜಮೀನನ್ನು ರೇವಜಿತ್ ಬಿಲ್ಡರ್ಸ್ ಕೊಂಡುಕೊಂಡರು. ಅವರು ಅದನ್ನು ಕೊಂಡಿರುವುದು ಕೇವಲ 92 ಲಕ್ಷ ರೂಪಾಯಿಗಳಿಗೆ. ಸರ್ಕಾರೀ ಸುತ್ತೋಲೆ ನಂ. ಆರ್‌ಡಿ. 329 ಎಸ್‌ಟಿ 79 ತಾ॥ 10–11–1982ರ ಪ್ರಕಾರ ಜಯನಗರದಲ್ಲಿ 1ರಿಂದ 4ನೇ ಬ್ಲಾಕ್‌ವರೆಗೆ ಒಂದು ಚದರ ಮೀಟರ್‌ಗೆ 750 ರೂಪಾಯಿನಂತೆ ದರ ಇರಬೇಕು. ನಂತರ ವರ್ಷಕ್ಕೆ 30 ಪರ್ಸೆಂಟ್ ಜಾಸ್ತಿ ಆಗಬೇಕೆಂದು ನಿಯಮ ಇದೆ. ಅಂದಾಗ 1988ರವರೆಗೆ ಲೆಕ್ಕ ಹಾಕಿದರೆ ಚದರ ಮೀಟರ್‌ಗೆ ಸಾವಿರಾರು ರೂಪಾಯಿಗಳ ಬೆಲೆ ಆಗಬೇಕಾಗಿತ್ತು. ಆ ಪ್ರಕಾರ ಇವರು ಕೊಂಡುಕೊಂಡಿರುವ ಒಟ್ಟು 22.662 ಚದರ ಮೀಟರ್‌ಗೆ 2 ಕೋಟಿ 20 ಲಕ್ಷ ರೂಪಾಯಿ ಆಗಬೇಕಾಗಿತ್ತು. ಆದರೆ ಇವರು ಕೊಂಡಿರುವುದು ಕೇವಲ 90 ಲಕ್ಷ ರೂಪಾಯಿಗಳಿಗೆ. ಇದು ಹೇಗೆ ಸಾಧ್ಯವಾಯಿತು? ಬಿ.ಡಿ.ಎ.ಯವರು ಎಕ್ಸ್‌ಟ್ರಾರ್ಡಿನರಿ ಪರ್ಮಿಷನ್ ಏನಾದರೂ ಕೊಟ್ಟಿದ್ದಾರೆಯೇ? ಎಕ್ಸ್‌ಟ್ರಾರ್ಡಿನರಿ ಇಂಟರೆಸ್ಟ್ ತೋರಿಸಿದ್ದಾರೆಯೇ? ಅರ್ಬನ್ ಲ್ಯಾಂಡ್ ಸೀಲಿಂಗ್‌ನವರು ಎಕ್ಸ್‌ಟ್ರಾರ್ಡಿನರಿ ಇಂಟರೆಸ್ಟ್ ತೋರಿಸಿದ್ದಾರೆಯೇ? ಬಿ.ಡಿ.ಎ.ಯವರು 5 ಎಕರೆ 24 ಗುಂಟೆಗೆ ಪರ್ಮಿಷನ್ ಕೊಟ್ಟಿದ್ದರೆ 22.662 ಚದರ ಮೀಟರ್ ಆಗುತ್ತಿತ್ತು. ಸರ್ಕಾರದವರು ಕೊಟ್ಟಿರುವುದು 19.638 ಚದರ ಮೀಟರ್‌ಗೆ. ಉಳಿದಿರುವ ಎರಡು ಸಾವಿರ ಚದರ ಮೀಟರ್ ಕೂಡ ರಿಜಿಸ್ಟರ್ ಆಗಿದೆ. ಇದು ಸರ್ಕಾರದ ನಜರಿಗೆ ಬರಲಿಲ್ಲವೇ? ಬಂದರೂ ಯಾವ ಕಾರಣದಿಂದ ಪರ್ಮಿಷನ್ ಕೊಟ್ಟರು? ಇವರನ್ನು ಭೂಕೈಲಾಸ ಮಾಡುತ್ತೇವೆ, ಇಂದ್ರ-ಚಂದ್ರ ಎಂದು ಹೊಗಳುತ್ತಿದ್ದ ಪತ್ರಿಕೆಯಲ್ಲಿ ಇವರ ಇತಿಹಾಸ-ಚರಿತ್ರೆ ಎಲ್ಲವನ್ನು ಕೊಟ್ಟಿದ್ದಾರೆ. ಆ ಚರಿತ್ರೆಯಲ್ಲಿ ಸಬ್ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಆಗಿರುವ ರಾದ್ಧಾಂತ, 50 ಪರ್ಸೆಂಟ್ ರಿಯಾಯಿತಿ ಇನ್ನೂ ಅನೇಕ ವಿಚಾರಗಳು ಈ ಪತ್ರಿಕೆಯಲ್ಲಿ ಬಂದಿದೆ. ಈ ವಿಚಾರಗಳ ಮೇಲೆ ಅನೇಕ ತರಹದ ಚರ್ಚೆಯನ್ನು ಮಾಡಬೇಕಾಗಿದೆ. ಇದು ನಮ್ಮ ಸ್ವಂತದ್ದೇನು ಅಲ್ಲ, ಇದು ಪಬ್ಲಿಕ್ ಆಸ್ತಿ. ಸುಮಾರು 2–3 ಕೋಟಿ ರೂಪಾಯಿಗಳ ಆಸ್ತಿಯನ್ನು ಮುಖ್ಯ ಮಂತ್ರಿಗಳ ಮೊಮ್ಮಕ್ಕಳ ಹೆಸರಿನಲ್ಲಿ (ರೇವತಿ–ಜಿತು ಅಂತ) ರೇವಜಿತ್ ಬಿಲ್ಡರ್ಸ್ ಎಂದು ರಿಜಿಸ್ಟರ್ ಮಾಡಿಸಿದ್ದಾರೆ. ನಾನು ಒಂದು ಕಾಲದಲ್ಲಿ ಪತ್ರಿಕೆಯಲ್ಲಿ ಓದಿದ್ದೆ, ಎಲ್ಲರ ಹೆಸರೂ ಇದೆ, ಮೊಮ್ಮಕ್ಕಳ ಹೆಸರು ಬಿಟ್ಟಿದೆ.....

ಶ್ರೀ ಆರ್. ವಿ. ದೇಶಪಾಂಡೆ.—ನಾವಂತೂ ಕೇಳಿಲ್ಲಿಲ್ಲ ಮುಖ್ಯ ಮಂತ್ರಿಗಳ ಮೊಮ್ಮಕ್ಕಳ ಹೆಸರು ಆ ರೀತಿ ಇದೆ ಎಂದು. ಅವರ ಮೊಮ್ಮಕ್ಕಳ ಹೆಸರು ಆ ರೀತಿ ಇಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೇವತಿ ಮತ್ತು ಜಿತು – ಎರಡೂ ಸೇರಿ...

(ಗೊಂದಲ)

ಅಧ್ಯಕ್ಷರು.—ಮಕ್ಕಳ ಮತ್ತು ಮೊಮ್ಮಕ್ಕಳ ಹೆಸರನ್ನು ಏಕೆ ಇಲ್ಲಿ ತೆಗೆಯುತ್ತೀರಿ?

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.